ದಿನಾಂಕ 02-06-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆ ಪಾಟೀ ಸವಾಲು ವಾದಿ ಪರ ಶ್ರೀ ಕೆ ಎಂ ಎಂ ವಕೀಲರಿಂದಃ-

9. ನನ್ನ ಪತಿ ಸಂಪಂಗಯ್ಯ ಹೆಬ್ಬೆಟ್ಟು ಗುರುತು ಹಾಕುತ್ತಾರೆ. ನನ್ನ ಪತಿ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನನಗೆ ಬರೆದುಕೊಟ್ಟಿರುವ ದಾನ ಪತ್ರದ ಮೂಲ ಪ್ರತಿ ನನ್ನ ಬಳಿ ಇದೆ. ನನಗೆ ಮತ್ತು ನನ್ನ ಪತಿಗೆ ವಾದಿ ಮತ್ತು ಅವರ ಪತಿ ಚೆನ್ನಾಗಿ ಗೊತ್ತಿದೆ ಎಂದರೆ ಸರಿಯಲ್ಲ. ರವಿಕುಮಾರ ಹಾಗೂ ಚಿಕ್ಕಣ್ಣರವರು ನನಗೆ ಗೊತ್ತಿದೆ ಎಂದರ ಸರಿಯಲ್ಲ. ಅಗ್ರಿಮೆಂಟಿಗೆ ಅವರಿಬ್ಬರು ಸಾಕ್ಷಿದಾರರು ಎಂದರೆ ಗೊತ್ತಿಲ್ಲ. ಅಗ್ರಿಮೆಂಟ್ ಗೆ ವಾದಿಯ ಪತಿ ಸಹ ಸಾಕ್ಷಿಯಾಗಿ ಸಹಿ ಹಾಕಿದ್ದಾರೆಂದರೆ ಗೊತ್ತಿಲ್ಲ. ನಿಪಿ-9 ಅಗ್ರಿಮೆಂಟ್ ವಾದಿ ನನ್ನ ಪತಿ, ಸಾಕ್ಷಿದಾರರ ಸಮ್ಮುಖದಲ್ಲೇ ಅದದ್ದು ಎಂದರೆ ಇಲ್ಲ. ನಿಪಿ-9 ಅಗ್ರಿಮೆಂಟ್ ಅಡಿ ವಾದಿಯಿಂದ 8 ವರೆ ಲಕ್ಷ ಕ್ರಯದ ಹಣದ ಪೈಕಿ 1 ವರೆ ಲಕ್ಷ ಮುಂಗಡ ಹಣ ಪಡೆದುಕೊಂಡಿದ್ದೇನೆಂದರೆ ಸರಿಯಲ್ಲ. ಮುಂಗಡ ಹಣ ಪಡೆದುಕೊಂಡ ನಂತರವೇ ನಿಪಿ-9 ಕ್ಕೆ ನಾನು , ವಾದಿ, ಸಾಕ್ಷಿದಾರರು ಎಲ್ಲಾ ಸಹಿ ಮಾಡಿದ್ದೀರಿ ಹಾಗೂ ನಿಮ್ಮ ಪತಿ ಹೆಬ್ಬೆಟ್ಟು ಗುರುತು ಹಾಕಿದ್ದಾರೆಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾವು ದಾಖಲೆಗಳನ್ನು 6 ತಿಂಗಳೊಳಗೆ ರೆಡಿ ಮಾಡಿಕೊಳ್ಳಬೇಕೆಂದು ಒಪ್ಪಂದ ಅಯಿತು, 6 ತಿಂಗಳ ನಂತರ ಕ್ರಯಪತ್ರ ನೋಂದಣಿಯಾಗಬೇಕೆಂದು ಒಪ್ಪಂದ ಅಯಿತು ಎಂದರೆ ಸರಿಯಲ್ಲ. ವಾದಿ ಬಾಕಿ ಹಣ 7ಲಕ್ಷ ಇಟ್ಟುಕೊಂಡು ಕ್ರಯಪತ್ರ ಬರೆದುಕೊಡಿ ಎಂದು ನಮ್ಮನ್ನು ಹಲವು ಬಾರಿ ಕೇಳಿದ್ದಾರೆಂದರೆ ಸರಿಯಲ್ಲ. ವಾದಿ ಇವತ್ತಿಗೂ ಕ್ರಯಪತ್ರ ಬರೆಸಿಕೊಳ್ಳಲು ರೆಡಿ ಇದ್ದಾರೆ ನೀವು ಕ್ರಯಪತ್ರ ಬರೆದುಕೊಡಲು ನಿರಾಕರಿಸಿದ್ದೀರಿ ಎಂದರೆ ಸಾಕ್ಷಿ ವಾದಿ ಯಾರು ಎಂದೇ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-4 ರಂತೆ ವಾದಿ ದಾವಾ ಸಲ್ಲಿಸುವ ಮುಂಚೆ ನೋಟೀಸು ಕಳುಹಿಸಿದ್ದು ಅದನ್ನು ನಾನು ಉದ್ದೇಶ ಪೂರ್ವಕವಾಗಿ ನಿರಾಕರಿಸಿದ್ದೇನೆಂ ದರೆ ಸರಿಯಲ್ಲ. ಬಾಕಿ ಹಣ ಪಡೆದುಕೊಂಡು ಕ್ರಯಪತ್ರ ನೋಂದಣಿ

ಮಾಡಿಕೊಡುವುದು ನನ್ನ ಬಾದ್ಯತೆ ಎಂದರೆ ಸರಿಯಲ್ಲ. ನಿಡಿ-1 ಮತ್ತು 2 ಕೊಟ್ಟಿರುವ ದಾಖಲೆಗೂ ಈ ಕೇಸಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.